**ಪಪಕರ್ನಾಟಕ ಸರ್ಕಾರ**
**ಪದವಿ ಪೂರ್ವ ಶಿಕ್ಷಣ ಇಲಾಖೆ**
**ರಾಷ್ಟ್ರೀಯ ಸೇವಾ ಯೋಜನೆ**

ಸಂಖ್ಯೆ:ಪಪೂಶಿಇ/ರಾಸೇಯೋ/ENR/11/2016-17 ದಿನಾಂಕ: 24-06-2016

**ಸುತ್ತೋಲೆ**

**ವಿಷಯ: 2016-17ನೇ ಸಾಲಿನ ವಿದ್ಯಾರ್ಥಿಗಳ ಪಟ್ಟಿ ಮತ್ತು ಕಾರ್ಯಕ್ರಮಾಧಿಕಾರಿಗಳ ಅನುಮೋದನೆ ಕುರಿತು.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2016-17ನೇ ಸಾಲಿಗೆ ಎನ್.ಎಸ್.ಎಸ್. ಗೆ ಸೇರಿರುವ ತಮ್ಮ ಕಾಲೇಜಿನ 100 ವಿದ್ಯಾರ್ಥಿಗಳ ಪಟ್ಟಿ ಮತ್ತು ಕಾರ್ಯಕ್ರಮಾಧಿಕಾರಿಯ ವಿವರಗಳನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆಗಳಲ್ಲಿ ತುಂಬಿ, ಆಗಸ್ಟ್ 31-08-2016 ರೊಳಗೆ ವಿದ್ಯಾರ್ಥಿಗಳ ಪಟ್ಟಿ ಮತ್ತು ವಿಶೇಷ ಶಿಬಿರದ ನಮೂನೆಗಳನ್ನು ಭರ್ತಿ ಮಾಡಿ ಶ್ರೀಮತಿ ಪಿ.ಆರ್. ಗಾಯಿತ್ರಿ ರೆಡ್ಡಿ, ಸಂಯೋಜನಾಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 12 ಇವರ ವಿಳಾಸಕ್ಕೆ ಕಳುಹಿಸುವುದು.

ಮೈಸೂರು ವಿಭಾಗದ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳು ಸರ್ಕಾರಿ ಮಹಾರಾಣಿ ಪದವಿ ಪೂರ್ವ ಕಾಲೇಜು ಆವರಣ, ಪದವಿ ಪೂರ್ವ ಶಿಕ್ಷಣ ಇಲಾಖೆ, ಎನ್.ಎಸ್. ರಸ್ತೆ, ಮೈಸೂರು – 24. ಬೆಳಗಾಂ ವಿಭಾಗದವರು ಸಹಾಯಕ ಸಂಯೋಜನಾಧಿಕಾರಿಗಳು, ಉಪ ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಆರ್.ಎನ್. ಶೆಟ್ಟಿ ಕ್ರೀಡಾಂಗಣ ಎದುರು ಕಾಲೇಜು ರಸ್ತೆ, ಧಾರವಾಡ ಇಲ್ಲಿಗೆ ಹಾಗೂ ಗುಲ್ಬರ್ಗಾ ವಿಭಾಗದವರು ಸಹಾಯಕ ಸಂಯೋಜನಾಧಿಕಾರಿಗಳು, ಉಪ ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣ, ಜವಳಗೆರೆ, ಸಿಂಧನೂರು ತಾ॥ ರಾಯಚೂರು ಜಿಲ್ಲೆ ಇಲ್ಲಿಗೆ ನಕಲು ಪ್ರತಿಯನ್ನು ಕಳುಹಿಸಲು ಕೋರಿದೆ. 2016 ಆಗಸ್ಟ್ 25ರ ನಂತರ ಬಂದ ವಿದ್ಯಾರ್ಥಿಗಳ ಅನುಮೋದನೆ ಪಟ್ಟಿಯನ್ನು ಸ್ವೀಕರಿಸುವುದಿಲ್ಲ.

**ದೈನಂದಿನ ಚಟುವಟಿಕೆಗಳ ಪ್ರಸ್ತಾವನೆ:**

1. ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆಗಳಲ್ಲಿ ಮಾಹಿತಿಗಳನ್ನು ತುಂಬಿ ಕಳುಹಿಸಬೇಕು.
2. 100 ವಿದ್ಯಾರ್ಥಿಗಳ ಪಟ್ಟಿಯನ್ನು ಅನುಮೋದನೆಗೆ ಕಳುಹಿಸಲು ಸೂಚಿಸಿದೆ.
3. ಮೈಸೂರಿನ ಪ್ರಶಿಕ್ಷಣ ಸಂಸ್ಥೆಯಿಂದ ತರಬೇತಿ ಪಡೆದ ಕಾರ್ಯಕ್ರಮಾಧಿಕಾರಿಗಳನ್ನು 4 ವರ್ಷದ ಮೊದಲೇ ಬದಲಾಯಿಸುವಂತಿಲ್ಲ.

**ವಿಶೇಷ ಶಿಬಿರದ ಪ್ರಸ್ತಾವನೆ:**

1. "ರಾಷ್ಟ್ರ ಸೇವೆ ಎನ್.ಎಸ್.ಎಸ್. ಸಂಕಲ್ಪ"
2. 2016-17 ನೇ ಸಾಲಿನ ವಿಶೇಷ ಶಿಬಿರವನ್ನು 2016ರ ಆಗಸ್ಟ್ ನಿಂದ ಜನವರಿಯವರೆಗೆ ಹಮ್ಮಿಕೊಳ್ಳಬೇಕು ಶಿಬಿರ ನಡೆಸುವುದು ಕಡ್ಡಾಯವಾಗಿರುತ್ತದೆ. ದೈನಂದಿನ ಚಟುವಟಿಕೆಗಳ ಪ್ರಸ್ತಾವನೆಯ ಜೊತೆಗೆ ವಿಶೇಷ ಶಿಬಿರದ ಪ್ರಸ್ತಾವನೆಯನ್ನು ಕಳುಹಿಸಕೊಡಲು ಸೂಚಿಸಿದೆ. ವಿಶೇಷ ಶಿಬಿರ ಎಲ್ಲಾ ಕಾಲೇಜುಗಳಿಗೂ ಕಡ್ಡಾಯವಾಗಿರುತ್ತದೆ.
3. ಶಿಬಿರದಲ್ಲಿ ಭಾಗವಹಿಸುವ 50 ವಿದ್ಯಾರ್ಥಿಗಳ ಹೆಸರು ಮತ್ತು ತರಗತಿ ವಿವರವುಳ್ಳ ಪಟ್ಟಿ ವಿಶೇಷ ಶಿಬಿರದಲ್ಲಿ ಪಾಲ್ಗೊಳ್ಳುವ 50 ವಿದ್ಯಾರ್ಥಿಗಳ ಪಟ್ಟಿಯನ್ನು ಈ ಕೆಳಕಂಡಂತೆ ವರ್ಗೀಕರಣ ಮಾಡಿ ಕಳುಹಿಸಬೇಕು.

| ಎಸ್.ಸಿ | | | ಎಸ್.ಟಿ | | | ಮೈನಾರಿಟಿ | | | ಇತರೆ | | | ಒಟ್ಟು | | |
|---|---|---|---|---|---|---|---|---|---|---|---|---|---|---|
| ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| | | | | | | | | | | | | | | |

4. ರೂ. 22,500/- ಗಳ ಆಯವ್ಯಯ ಪಟ್ಟಿ.
5. ವಿಶೇಷ ಶಿಬಿರದಲ್ಲಿ ಹಮ್ಮಿಕೊಳ್ಳುವ ಕಾರ್ಯ ಯೋಜನೆಗಳು
6. ದತ್ತು ಗ್ರಾಮದ ಆಯ್ಕೆ ಮತ್ತು ಸಲಹಾ ಸಮಿತಿಯ ನಡಾವಳಿ

**ವಿಶೇಷ ಸೂಚನೆಗಳು**

1. ಮಹಿಳಾ ಕಾಲೇಜು ಘಟಕಗಳಿಗೆ ಮಹಿಳಾ ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿಯನ್ನು ನೇಮಕ ಮಾಡಬೇಕು. ಮಹಿಳಾ ಉಪನ್ಯಾಸಕಿಯರು ಇಲ್ಲವಾದಲ್ಲಿ ಪುರುಷ ಉಪನ್ಯಾಸಕರನ್ನು ನೇಮಕ ಮಾಡಬಹುದು.

2. ಕೆಲವು ಕಾಲೇಜುಗಳಲ್ಲಿ ದೈನಂದಿನ ಕಾರ್ಯಕ್ರಮಗಳನ್ನು ಮಾಡಿ, ವಿಶೇಷ ಶಿಬಿರವನ್ನು ನಡೆಸುತ್ತಿಲ್ಲ, 2016-17 ನೇ ಸಾಲಿನಲ್ಲಿ ಎಲ್ಲಾ ಘಟಕಗಳಿಗೂ ಶಿಬಿರ ಕಡ್ಡಾಯವಾಗಿರುತ್ತದೆ. ವಿಶೇಷ ಶಿಬಿರ ನಡೆಸದೇ ಇದ್ದಲ್ಲಿ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಘಟಕವನ್ನು ರದ್ದುಪಡಿಸಲಾಗುವುದು.

3. ಕೆಲವು ಕಾಲೇಜುಗಳು ಪದವಿ ಕಾಲೇಜುಗಳೊಂದಿಗೆ ವಿಶೇಷ ಶಿಬಿರವನ್ನು ನಡೆಸಿರುವುದು, ಆ ಶಿಬಿರಗಳಲ್ಲಿ ಕಡಿಮೆ ವಿದ್ಯಾರ್ಥಿಗಳು ಪಾಲೊಂಡಿರುವುದು, ಈ ಬಗ್ಗೆ ಇಲಾಖೆಗೆ ದೂರುಗಳು ಬಂದಿವೆ. ಪದವಿ ಕಾಲೇಜುಗಳೊಂದಿಗೆ ಸೇರಿ ವಿಶೇಷ ಶಿಬಿರ ನಡೆಸುವಂತಿಲ್ಲ. ಆ ರೀತಿ ನಡೆಸುವಂತಿದ್ದರೆ ಕೇಂದ್ರ ಕಛೇರಿಯ ಪೂರ್ವಾನುಮತಿ ಕಡ್ಡಾಯವಾಗಿರುತ್ತದೆ.

4. ಕೆಲವು ಕಾಲೇಜುಗಳ ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿಗಳು ವಿಶೇಷ ಶಿಬಿರ ನಡೆಯುವ ಸಮಯದಲ್ಲಿ ರಾತ್ರಿ ವೇಳೆ ಶಿಬಿರದಲ್ಲಿ ವಾಸ್ತವ್ಯ ಮಾಡದೆ ಬದಲಿ ವ್ಯವಸ್ಥೆ ಮಾಡಿರುವುದರ ಬಗ್ಗೆ ಇಲಾಖೆಗೆ ದೂರುಗಳು ಬಂದಿವೆ. ನಿಯಮಾನುಸಾರ ಶಿಬಿರಾಧಿಕಾರಿಗಳು ಶಿಬಿರದಲ್ಲಿ ವಾಸ್ತವ್ಯ ಮಾಡುವುದು ಕಡ್ಡಾಯವಾಗಿರುತ್ತದೆ.

5. ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳು ಒಟ್ಟಿಗೆ ನಡೆಯುತ್ತಿರುವ ಸ್ಥಳಗಳಲ್ಲಿ ಪ್ರೌಢಶಾಲಾ ವಿಭಾಗದ ದೈಹಿಕ ಶಿಕ್ಷಕರನ್ನು ಎನ್.ಎಸ್.ಎಸ್ ಅಧಿಕಾರಿಯಾಗಿ ನೇಮಕ ಮಾಡಿರುತ್ತಾರೆ. ಈ ರೀತಿಯ ನೇಮಕ ಸರಿಯಲ್ಲ, ಕಾಲೇಜಿನ ಉಪನ್ಯಾಸಕ/ಉಪನ್ಯಾಸಕಿಯರನ್ನು ಮಾತ್ರ ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿಯಾಗಿ ನೇಮಕ ಮಾಡಬೇಕು.

6. ಕೆಲವು ಪದವಿ ಪೂರ್ವ ಕಾಲೇಜುಗಳಲ್ಲಿ ಅರೆಕಾಲಿಕ ಉಪನ್ಯಾಸಕರನ್ನು ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿಯಾಗಿ ನೇಮಕ ಮಾಡಿರುವುದು. ಅವರುಗಳು ಶಿಬಿರವನ್ನು ಉತ್ತಮವಾಗಿ ಸಂಘಟನೆ ಮಾಡದಿರುವ ಬಗ್ಗೆ ದೂರುಗಳು ಬಂದಿರುತ್ತವೆ. ಆದುದರಿಂದ ಅರೆಕಾಲಿಕ ಉಪನ್ಯಾಸಕರನ್ನು ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿಯಾಗಿ ನೇಮಿಸುವಂತಿಲ್ಲ. ಖಾಯಂಗೊಂಡ ಉಪನ್ಯಾಸಕರನ್ನು ಕಾರ್ಯಕ್ರಮಾಧಿಕಾರಿಯಾಗಿ ನೇಮಕ ಮಾಡಬೇಕು.

7. ವಿಶೇಷ ಶಿಬಿರದ ಆಹ್ವಾನ ಪತ್ರಿಕೆಯಲ್ಲಿ ವಿಶೇಶ ಆಹ್ವಾನಿತರ (ಅಧಿಕಾರಿ ವರ್ಗದವರ) ಹೆಸರುಗಳನ್ನು ಮುದ್ರಿಸುವಾಗ ಇಲಾಖೆಯ ಶಿಷ್ಟಾಚಾರ ನಿಯಮವನ್ನು ಪಾಲಿಸುವುದು ಕಡ್ಡಾಯವಾಗಿರುತ್ತದೆ.

8. ಗಾಂಧಿ ವಿಚಾರ ಸಂಕೀರ್ಣ ಮತ್ತು ವಿವೇಕಾನಂದ ವಿಚಾರಧಾರೆಗಳು ಕುರಿತು ಕಾರ್ಯಕ್ರಮಗಳು ಹಾಗೂ ಧಾರ್ಮಿಕ ಕೇಂದ್ರಗಳ ಸ್ವಚ್ಛತೆ ಮತ್ತು ಜೀರ್ಣೋದ್ಧಾರ ಕಾರ್ಯಚಟುವಟಿಕೆಗಳು ಇವುಗಳನ್ನು ಕಡ್ಡಾಯವಾಗಿ ಮಾಡುವುದು.

9. ಇಲಾಖೆಯಿಂದ ವಿಶೇಷ ಶಿಬಿರದ ಅನುದಾನ ಬಿಡುಗಡೆಯಾಗುವುದು ತಡವಾದಲ್ಲಿ – ಕಾಲೇಜಿನ ಸಂಚಿತ ನಿಧಿಯಿಂದ ಅಥವಾ ಆಡಳಿತ ಮಂಡಳಿಗಳಿಂದ ಹಣ ಪಡೆದು ಶಿಬಿರವನ್ನು ನಡೆಸಬೇಕಾಗಿರುತ್ತದೆ. ಈ ಬಗ್ಗೆ ನಿರ್ದೇಶಕರ ಒಪ್ಪಿಗೆ ಪತ್ರವನ್ನು ಕಳುಹಿಸಲಾಗುವುದು. ಕಳೆದ ಸಾಲಿನಲ್ಲಿ ನಿರ್ದೇಶಕರ ಅನುಮೋದನೆ ಪತ್ರ ಕಳುಹಿಸಿದರೂ ಕೆಲವು ಪದವಿ ಪೂರ್ವ ಕಾಲೇಜುಗಳು ವಿಶೇಷ ಶಿಬಿರ ನಡೆಸಿರುವುದಿಲ್ಲ 2016-17 ನೇ ಸಾಲಿನಲ್ಲಿ ವಿಶೇಷ ಶಿಬಿರ ಕಡ್ಡಾಯವಾಗಿರುತ್ತದೆ. ಶಿಬಿರ ನಡೆಸದೆ ಇದ್ದರೆ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಘಟಕ ರದ್ದುಪಡಿಸಲಾಗುವುದು.

10. ವಿಶೇಷ ಶಿಬಿರ ನಡೆದ 15 ದಿನಗಳಲ್ಲಿ ವರದಿಯನ್ನು ಸಂಯೋಜನಾಧಿಕಾರಿಗಳಿಗೆ ತಲುಪಿಸಬೇಕು.

11. ಮಹಿಳಾ ಕಾರ್ಯಕ್ರಮಾಧಿಕಾರಿಗಳು ಇಲಾಖೆಯು ನಡೆಸುವ ವಿಭಾಗ ಮತ್ತು ರಾಜ್ಯಮಟ್ಟದ ವಿಶೇಷ ಶಿಬಿರಗಳಿಗೆ ನಿಯೋಜನೆ ಮಾಡಿದಾಗ ನಿಯೋಜನೆಯಂತೆ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದು ಕಡ್ಡಾಯವಾಗಿರುತ್ತದೆ.

12. ಪ್ರಶಿಕ್ಷಣ ತರಬೇತಿ ಹೊಂದಿದ ಉಪನ್ಯಾಸಕರು ಇದ್ದರೆ ಅವರನ್ನೇ ಕಾರ್ಯಕ್ರಮಾಧಿಕಾರಿಗಳನ್ನಾಗಿ ನೇಮಿಸಬೇಕು.

13. ರಾಷ್ಟ್ರೀಯ ಸೇವಾ ಯೋಜನೆಯ ವತಿಯಿಂದ ನಡೆಸುವ ಜಿಲ್ಲಾ ಮಟ್ಟದ, ವಿಭಾಗ ಮಟ್ಟದ, ರಾಜ್ಯಮಟ್ಟದ ವಿಶೇಷ ಶಿಬಿರಗಳಿಗೆ ವಿದ್ಯಾರ್ಥಿಗಳನ್ನು ನಿಯೋಜನೆ ಮಾಡುವಂತೆ ಇಲಾಖೆಯಿಂದ ಪತ್ರ ಬಂದರೆ ನಿಯೋಜನೆ ಮಾಡುವುದು ಕಡ್ಡಾಯವಾಗಿರುತ್ತದೆ.

14. ಸಸಿ ನೆಡಿಸುವಿಕೆ, ಉಚಿತ ಆರೋಗ್ಯ ತಪಾಸಣೆ ಮತ್ತು ಇಂಗ್ಲೀಷ್ ಬೋಧನೆ, ಹದಿಹರೆಯದ ಸಮಸ್ಯೆಗಳು ಮತ್ತು ಪರ ಪರಿಹಾರಗಳು (ಈ ಕಾರ್ಯಕ್ರಮಗಳು ಕಡ್ಡಾಯವಾಗಿರುತ್ತವೆ.)

15. ಮಾದಕ ವಸ್ತುಗಳ ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ.

16. ಕಾಲೇಜಿನ ವಿಶೇಷ ಶಿಬಿರ ನಡೆದ ಒಂದು ವಾರದೊಳಗೆ ವಿಶೇಷ ಶಿಬಿರದ ವರದಿ ಕಳುಹಿಸಬೇಕು. ಇಲಾಖೆ ಗೊತ್ತುಪಡಿಸದ ದಿನಾಂಕ ಮತ್ತು ಸ್ಥಳದಲ್ಲಿ ಕಾರ್ಯಕ್ರಮಾಧಿಕಾರಿ ಹಾಜರಾಗಿ ವಾರ್ಷಿಕ ಲೆಕ್ಕಪತ್ರಗಳನ್ನು ಸಲ್ಲಿಸಬೇಕು ಎಂಬ ನಿಯಮವಿದ್ದರು, ಕೆಲವು ಕಾಲೇಜುಗಳು 2016-17ನೇ ಸಾಲಿನ ಲೆಕ್ಕಪತ್ರಗಳನ್ನು ವಾರ್ಷಿಕ ಲೆಕ್ಕಪತ್ರಗಳ ಅವಧಿ ಮುಗಿದ ನಂತರ ಸಲ್ಲಿಸಿವೆ. ಇದರಿಂದ ಹಣ ಬಿಡುಗಡೆ ಮಾಡಲು ತೊಂದರೆಯಾಗುತ್ತದೆ. 2016-17 ನೇ ಸಾಲಿನಲ್ಲಿ ತಡವಾಗಿ ಲೆಕ್ಕಪತ್ರಗಳನ್ನು ಸಲ್ಲಿಸಿದರೆ ಅಂತಿಮ/ಶಿಬಿರದ ಅನುದಾನ ಬಿಡುಗಡೆ ಮಾಡುವುದಿಲ್ಲವೆಂಬ ವಿಷಯವನ್ನು ಪ್ರಾಂಶುಪಾಲರ ಮತ್ತು ಕಾರ್ಯಕ್ರಮಾಧಿಕಾರಿಗಳ ಗಮನಕ್ಕೆ ತರಲಾಗಿದೆ.

17. ವಿಶೇಷ ಶಿಬಿರ ನಡೆಯುವ ಸಮಯದಲ್ಲಿ ಕಾರ್ಯಕ್ರಮಾಧಿಕಾರಿಗಳು ಜಾಗರೂಕತೆಯಿಂದ ವಿದ್ಯಾರ್ಥಿಗಳನ್ನು ನೋಡಿಕೊಳ್ಳಬೇಕು. ಯಾವುದೇ ಅಹಿತಕರ ಘಟನೆ ಮತ್ತು ಅವಘಡಗಳಿಗೆ ಅವಕಾಶ ನೀಡಬಾರದು. ಆ ರೀತಿ ನಡೆದರೆ ಕಾರ್ಯಕ್ರಮಾಧಿಕಾರಿಗಳೇ ಹೊಣೆಗಾರರಾಗುತ್ತಾರೆ. ಶಿಬಿರದಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳು ತಂದೆ/ತಾಯಿ/ಪೋಷಕರಿಂದ ಒಪ್ಪಿಗೆ ಪತ್ರ ಪಡೆಯುವುದು ಕಡ್ಡಾಯವಾಗಿರುತ್ತದೆ.

ಸಹಿ/-
ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

ವಿದ್ಯಾರ್ಥಿಗಳು ಮತ್ತು ಕಾರ್ಯಕ್ರಮಾಧಿಕಾರಿಗಳ ಅನುಮೋದನೆ ಈ ಕೆಳಕಂಡ ನಮೂನೆಗಳನ್ನು ಭರ್ತಿ ಮಾಡಿ ಕಳುಹಿಸಬೇಕು.

ಸಂಯೋಜನಾಧಿಕಾರಿಗಳು
ರಾಷ್ಟ್ರೀಯ ಸೇವಾ ಯೋಜನೆ
ಪದವಿ ಪೂರ್ವ ಶಿಕ್ಷಣ ಇಲಾಖೆ
ಬೆಂಗಳೂರು

## ನಮೂನೆ – 1

## DETAILS OF COLLEGES, WHICH ARE IMPLEMENTING THE NSS PROGRAMME IN THE STATE

College Code: [ ]

1. Name of the College :
2. Name of the Principal with Residential Phone No. :
3. Name of the NSS Programme Officer & Date from which working, Whether trained or untrained. If trained when and where :
4. Total No. of Students in the College :
5. Total No. of NSS Volunteers :
6. Name of the adopted village :

## ನಮೂನೆ – 2

## STATEMENT OF ENROLLMENT

## LIST OF STUDENT VOLUNTEERS ENROLLED UNDER NSS TO BE SENT TO THE DIRECTORATE

College Code: [ ]

Name of the College :
Academic Year :

| Sl. No. | Name of the Student and Class | Date of Birth | Date of first enrollment in NSS | Mention whether the candidate belongs to SC/ST/BT/Minorities |
|---|---|---|---|---|
| 1. | 2. | 3. | 4. | 5. |
| | | | | |

**CERTIFIED THAT :**

1. The Particulars given in this list are correct.
2. The students have applied in the prescribed form and have actually been enrolled as NSS Volunteers.

**Signature of the Principal**

**Signature of the NSS Programme Officer with Seal**

## <u>ನಮೂನೆ – 2</u>

## DETAILS OF ENROLLED STUDENTS DURING 2016-17

College Code:

**NAME OF THE COLLEGE :**

| Allocation | Actual Enrollment | | | SC | | | ST | | | Remarks |
|---|---|---|---|---|---|---|---|---|---|---|
| | Male | Female | Total | Male | Female | Total | Male | Female | Total | |
| | | | | | | | | | | |

**ವಿಶೇಷ ಶಿಬಿರದ ವಿಶೇಷ ಆಹ್ವಾನಿತರ ಪಟ್ಟಿಯಲ್ಲಿ ಇಲಾಖೆಯ ಅಧಿಕಾರಿ ವರ್ಗದವರನ್ನು ಶಿಷ್ಟಾಚಾರದ ನಿಯಮದಂತೆ ಈ ಕೆಳಕಂಡಂತೆ ಮುದ್ರಿಸಬೇಕು.**

1. **ಶ್ರೀ ಜೈ ಕುಮಾರ್**
   ನಿರ್ದೇಶಕರು,
   ಪದವಿ ಪೂರ್ವ ಶಿಕ್ಷಣ ಇಲಾಖೆ,
   ಬೆಂಗಳೂರು.

2. **ಶ್ರೀ ವಿ.ಕೆ. ನಾಗರಾಜ್**
   **ಜಂಟಿ ನಿರ್ದೇಶಕರು (ಶೈಕ್ಷಣಿಕ)**
   ಪದವಿ ಪೂರ್ವ ಶಿಕ್ಷಣ ಇಲಾಖೆ,
   ಬೆಂಗಳೂರು.

3. **ಶ್ರೀ ಎ.ಎನ್. ಪೂಜಾರ್**
   ಪ್ರಾಂತೀಯ ನಿರ್ದೇಶಕರು
   ಭಾರತ ಸರ್ಕಾರ ರಾಷ್ಟ್ರೀಯ ಸೇವಾ ಯೋಜನೆ
   ನಂ. 57/190, ಪ್ರಾಂತೀಯ ಕೇಂದ್ರ,
   ಬೆಂಗಳೂರು.

4. **ಶ್ರೀ ಗಣನಾಥ್ ಶೆಟ್ಟಿ**
   ರಾಜ್ಯ ಎನ್ ಎಸ್ ಎಸ್ ಅಧಿಕಾರಿಗಳು
   ರಾಷ್ಟ್ರೀಯ ಸೇವಾ ಯೋಜನೆ ಕೋಶ,
   ಯುವಜನ ಸೇವಾ ಇಲಾಖೆ,
   ಕರ್ನಾಟಕ ಸರ್ಕಾರ,
   ಬೆಂಗಳೂರು.

5. **ಡಾ|| ಕೆ. ಕಾಳಚನ್ನೇಗೌಡ,**
   ಸಂಯೋಜನಾಧಿಕಾರಿಗಳು
   ಇಟಿಐ ವಿಶ್ವಮಾನವ ಅಂತರ ರಾಷ್ಟ್ರೀಯ
   ವಿದ್ಯಾರ್ಥಿನಿಲಯ, (ಸರ್ಕಾರಿ ಮುದ್ರಣಾಲಯದ ಎದುರು)
   ಮೊದಲನೇ ಮುಖ್ಯರಸ್ತೆ, ಸರಸ್ವತಿಪುರಂ,
   ಮೈಸೂರು.

6. **ಜಿಲ್ಲಾ ಉಪ ನಿರ್ದೇಶಕರು**
ಪದವಿ ಪೂರ್ವ ಶಿಕ್ಷಣ ಇಲಾಖೆ.

7. **ಶ್ರೀಮತಿ ಪಿ.ಆರ್. ಗಾಯಿತ್ರಿ ರೆಡ್ಡಿ,**
**ರಾಜ್ಯ ಎನ್.ಎಸ್.ಎಸ್. ಸಂಯೋಜನಾಧಿಕಾರಿಗಳು**
ಪದವಿ ಪೂರ್ವ ಶಿಕ್ಷಣ ಇಲಾಖೆ

8. **ಶ್ರೀ ಶಿವಮಾದಯ್ಯ**
ಸಹಾಯಕ ಸಂಯೋಜನಾಧಿಕಾರಿಗಳು,
ಪದವಿ ಪೂರ್ವ ಶಿಕ್ಷಣ ಇಲಾಖೆ
ಬೆಂಗಳೂರು ವಿಭಾಗ.

9. **ಶ್ರೀ. ಶಿವರಾಜ್ .ಎಸ್.**
ಸಹಾಯಕ ಸಂಯೋಜನಾಧಿಕಾರಿಗಳು, ಗುಲ್ಬರ್ಗಾ ವಿಭಾಗ.
ಸರ್ಕಾರಿ ಪದವಿ ಪೂರ್ವ ಕಾಲೇಜು,
ಜವಳಗೆರ, ಸಿಂಧನೂರು ತಾ॥
ರಾಯಚೂರು ಜಿಲ್ಲೆ – 584 143

10. **ಶ್ರೀ ಗಿರಿರಾಜ. ಪಿ.ಎಸ್.**
ಸಹಾಯಕ ಸಂಯೋಜನಾಧಿಕಾರಿಗಳು ಬೆಳಗಾಂ, ವಿಭಾಗ.
ಉಪ ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಆರ್.ಎನ್.ಶೆಟ್ಟಿ ಕ್ರಿಡಾಂಗಣದ ಎದುರು
ಕಾಲೇಜು ರಸ್ತೆ, ಧಾರವಾಡ

11. **ಶ್ರೀ ಲಯನ್ ಸಿ.ಆರ್. ದಿನೇಶ್**
ಸಹಾಯಕ ಸಂಯೋಜನಾಧಿಕಾರಿಗಳು, ಮೈಸೂರು ವಿಭಾಗ.
ಸರ್ಕಾರಿ ಮಹಾರಾಣಿ ಪದವಿ ಪೂರ್ವ ಕಾಲೇಜು ಆವರಣ,
ಪದವಿ ಪೂರ್ವ ಶಿಕ್ಷಣ ಇಲಾಖೆ
ಎನ್.ಎಸ್. ರಸ್ತೆ,
ಮೈಸೂರು – 570024

**ವಿಶೇಷ ಸೂಚನೆ : ವಿಶೇಷ ಶಿಬಿರದ ಆಹ್ವಾನಿತರ ಪಟ್ಟಿಯಲ್ಲಿ ನಿಮ್ಮ ವಿಭಾಗಕ್ಕೆ ಸಂಬಂಧಪಟ್ಟ ಸಹಾಯಕ ಸಂಯೋಜನಾಧಿಕಾರಿಗಳ ಹೆಸರುಗಳನ್ನು ಮುದ್ರಿಸ ತಕ್ಕದ್ದು.**

2016ನೇ ಸಾಲಿನಿಂದ ಎಲ್ಲಾ ಎನ್.ಎಸ್.ಎಸ್. ಘಟಕಗಳಿಗೆ ಅನುದಾನವನ್ನು S.B.M ಆನ್‌ಲೈನ್ ಬ್ಯಾಂಕಿಂಗ್ ಮೂಲಕ ಬಿಡುಗಡೆ ಮಾಡಲಾಗುವುದು. ಆದ್ದರಿಂದ ಈ ಕೆಳಕಂಡ ಮಾಹಿತಿಗಳನ್ನು ವಿದ್ಯಾರ್ಥಿಗಳ ಅನುಮೋದನೆ ಪ್ರತ್ಯೇಕವಾಗಿ ಕಳುಹಿಸಿಕೊಡಲು ಸೂಚಿಸಿದೆ.

Bank Name :

Branch Name :

Bank Address :

Branch Code No :

Account No. :

Online No. :

**ಸೂಚನೆ:**
ನಿಮ್ಮ ಕಾಲೇಜಿನ ಬ್ಯಾಮಕ್ ಖಾತೆಯನ್ನು ಎಸ್.ಬಿ.ಎಂ. ನಲ್ಲಿ ಕಡ್ಡಾಯವಾಗಿ ತೆರೆದು, ವಿದ್ಯಾರ್ಥಿಗಳ ಪಟ್ಟಿಯೊಂದಿಗೆ ಕಳುಹಿಸಲು ಸೂಚಿಸಿದೆ. ನಿಮ್ಮ ಕಾಲೇಜು ಇವರುವ ಸ್ಥಳದ ಪಿನ್ ಕೋಡ್ ತಪ್ಪದೇ ನಮೂದಿಸಿ ಕಳುಹಿಸುವುದು.

ಮೇಲ್ಕಂಡ ಎಲ್ಲಾ ನಮೂನೆಗಳನ್ನು ಭರ್ತಿ ಮಾಡಿ, ಶ್ರೀಮತಿ ಗಾಯಿತ್ರಿ ರೆಡ್ಡಿ, ರಾಷ್ಟ್ರೀಯ ಸೇವಾ ಯೋಜನೆ ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಕ್ರಾಸ್ ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012, ಇವರ ವಿಳಾಸಕ್ಕೆ ಕಳುಹಿಸಲು ಸೂಚಿಸಿದೆ. 2016 ಆಗಸ್ಟ್ 15 ರ ನಂತರ ಕಳುಹಿಸಿದ ಯಾವುದೇ ಪ್ರಸ್ತಾವನೆಗಳನ್ನು ಒಪ್ಪಿಕೊಳ್ಳಲಾಗುವುದಿಲ್ಲ. ನಿಮ್ಮ ಕಾಲೇಜಿಗೆ ನೀಡಿರುವ ಎನ್.ಎಸ್.ಎಸ್. ಘಟಕವನ್ನು ರದ್ದುಗೊಳಿಸಿ ಬೇರೆ ಕಾಲೇಜಿಗೆ ಸ್ಥಳಾಂತರಿಸಲಾಗುವುದು.

**ಪ್ರತಿಗಳು:**
1. ನಿರ್ದೇಶಕರ ಆಪ್ತಶಾಖೆ.
2. ರಾಜ್ಯ ಸಂಪರ್ಕಾಧಿಕಾರಿಗಳು ಎನ್.ಎಸ್.ಎಸ್. ಕೋಶ, ಯುವಜನ ಸೇವಾ ಇಲಾಖೆ, ಕರ್ನಾಟಕ ಸರ್ಕಾರ.
3. ಸಹಾಯಕ ಕಾರ್ಯಕ್ರಮ ಸಲಹೆಗಾರರು, ಎನ್.ಎಸ್.ಎಸ್. ಪ್ರಾಂತೀಯ ಕೇಂದ್ರ, ಭಾರತ ಸರ್ಕಾರ, ಬೆಂಗಳೂರು.
4. ಎನ್.ಎಸ್.ಎಸ್. ಘಟಕ ಹೊಂದಿರುವ ಎಲ್ಲಾ ಸರ್ಕಾರಿ/ಖಾಸಗಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಮುಂದಿನ ಕ್ರಮಕ್ಕಾಗಿ.
5. ಸಹಾಯಕ ನಿರ್ದೇಶಕರು ಇ–ಆಡಳಿತ, ಇವರಿಗೆ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು.

**NSS Regional Centre, Bangalore**
**Programmes Suggested for Strengthening NSS Regular Activities**

| Sl. No. | Name of the Topics |
|---|---|
| 1. | Workshop on "commonalities in all Religions-Rituals and Spirituals" |
| 2. | Workshop on "Social Investigation, Survey & Research" (To make the volunteers understand what research is all about) |
| 3. | Workshop on "Pre-Marriage Counseling" |
| 4. | Workshop on "Community singing-practice and performance" |
| 5. | Training in "career counseling" (Interview techniques, writing of resume, CV, preparing for selection tests and competitive examination) and Awareness on Recruitment procedures for selection in Air force, Navy, Army & Para-Military Forces. |
| 6. | Workshop on "Gandhian Thoughts, Teachings and Philosophy" (to assimilate the ideas of truth and non-vio0lence amongst the youngsters |
| 7. | Workshop on "Leadership Training & Personality Development |
| 8. | Workshop on "Human Rights" |
| 9. | Training on RTIs-Right of Information Act, Civic Rights" |
| 10. | Training in "Anchoring, Comparing, Event Management, Master of ceremony, Quizzing, Moderating and News reading. |
| 11. | Training in "Communicative English" |
| 12. | Workshop on "Training Production and Performance of Street plays" |
| 13. | Training on "Disaster Management, Rescue, Relief & Rehabilitation, First Aid & Trauma Care" |
| 14. | Lecture on "Adolescent, Health and Youth Lifestyle" |
| 15. | Workshop on "Environment Issues" i.e. Air Pollution, Water Pollution, Global Warming, Deforestations, Watershed Management, Rain water Harvesting. |
| 16. | Intra-City Initiatives (Local Colleges) - Quiz, Debate, Life-skills |
| 17. | Workshop on "Role of Youth in Nation Building" |
| 18. | Bicycle Jatha on various issues/Themes |
| 19. | Tree Plantations |
| 20. | Book Bank |
| 21. | Blood donor cell /Blood donation |
| 22. | Importance of Independence Day, Republic Day and our constitution |
| 23. | Legal aid classes (District Legal Services Authority) |
| 24. | Child Labour Act |
| 25. | Consumer Protection Laws |
| 26. | Awareness on Alcohol, Gutka & Drug Abuse. |
| 27. | Drug Abuse |
| 28. | Lecture session on "Swami Vivekananda & His Philosophy" |

ಸಹ ಯೋಜನಾಧಿಕಾರಿಗಳು
ರಾಷ್ಟ್ರೀಯ ಸೇವಾ ಯೋಜನೆ
ಪದವಿ ಪೂರ್ವ ಶಿಕ್ಷಣ ಇಲಾಖೆ
ಬೆಂಗಳೂರು